ದಿನಾಂಕ 12-11-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಂ ಸಿ ಡಿ ವಕೀಲರಿಂದಃ-

ನಾನು ಬಿ ಟೆಕ್ ಮಾಡಿದ್ದೇನೆ. 1ನೇ ಪ್ರತಿವಾದಿ 10 ನೇ ತರಗತಿಯವರೆಗೆ ಕಲಿತಿದ್ದಾರೆ. 1ನೇ ಪ್ರತಿವಾದಿ ಆರೋಗ್ಯವಾಗಿದ್ದಾರೆ. ದಾವಾ ಸ್ವತ್ತು ಸರ್ವೆ ನಂ 67, 2 ಎಕರೆ 27 ಗುಂಟೆ ವಸೂರು ಗ್ರಾಮ ಬಿಡದಿ ಹೋಬಳಿ ರಾಮನಗರ ತಾಃ ನಲ್ಲಿ ಇದೆ ಎಂದರೆ ಸರಿ. ನಿಪಿ 2 ರ ಪ್ರಕಾರ ದಾವಾ ಸ್ವತ್ತು ನನ್ನ ಪತ್ನಿ 1 ಪ್ರತಿವಾದಿಗೆ ಅವರ ತಂದೆಯಿಂದ ದಾನ ಪತ್ರದ ಮುಖಾಂತರ ಬಂದಿದೆ ಎಂದರೆ ಸರಿ. ಅದು ನನ್ನ ಪತ್ನಿಯ ಸ್ವಂತ ಆಸ್ತಿ ಎಂದರ ಸರಿ. ವಾದಿ ವಾದ ಪತ್ರದಲ್ಲಿ ಏನು ಬರೆಸಿದ್ದಾರೆಂದು ತಿಳಿದುಕೊಂಡಿದ್ದೆನೆ . ನಾನು, ವಾದಿ , ಪ್ರತಿವಾದಿ 1 ಮತ್ತು 3 ರವರು ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆ ಹೊಸೂರು ತಾಲ್ಲೂಕಿನಲ್ಲಿ ವಾಸ ಎಂದರೆ ಸರಿ. ಕರಾರು ಪತ್ರದ ಕಾಲಕ್ಕೆ ನಿಪಿ 2 ದಾನ ಪತ್ರವನ್ನು ನಾವು ವಾದಿಗೆ ಕೊಟ್ಟಿದ್ದೇವು ಎಂದರೆ ಸರಿ. ನನ್ನ ಪತ್ನಿ ಈ ದಾವೆಯಲ್ಲಿ ಬಂದು ಸಾಕ್ಷ್ಯ ಕೊಡಲು ಅವರಿಗೆ ತೊಂದರೆ ಇಲ್ಲ. ದಾವಾ ಸ್ವತ್ತು ನನ್ನ ಪತ್ನಿಯ ಸ್ವಂತ ಆಸ್ತಿಯಾರಿರುವುದರಿಂದ ನನನಗೆ ಹಾಗೂ ನನ್ನ ಮಗನಿಗಾಗಲೀ ಹಕ್ಕು ಇಲ್ಲ ಎಂದರೆ ಸರಿ. ನಿಪಿ 1 ಕರಾರು ಪತ್ರಕ್ಕೆ ನನ್ನ ಸಹಿಯನ್ನು ನಾಮಕಾವಸ್ತೆಗೆ ತೆಗೆದುಕೊಂಡಿದ್ದಾರೆಂದರೆ ಸರಿ. ನಿಪಿ 1 ಕ್ಕೆ ನನ್ನ ಮಗನ ಸಹಿ ಅಗತ್ಯವಿರಲಿಲ್ಲ ಎಂದರೆ ಸರಿ. ಈ ಕೇಸಿನಲ್ಲಿ ಲಿಖಿತ ಹೇಳಿಕೆ ಸಲ್ಲಿಸಿದ್ದೇವೆಂದರೆ ಸರಿ. ನಿಪಿ 1 ನ್ನು ನಾನು ಮತ್ತು ನನ್ನಪತ್ನಿ ಸೇರಿ ವಾದಿಗೆ ಬರೆದುಕೊಟ್ಟು ಪ್ರತಿ ಪುಟಗಳಲ್ಲಿ ಸಹಿ ಮಾಡಿದ್ದೇವೆಂದರೆ ಸರಿ. ಕರಾರು ಪತ್ರದಲ್ಲಿ ನಾನು ಮತ್ತು ನನ್ನ ಪತ್ನಿ ಒಟ್ಟು 17 ಲಕ್ಷದ ಪೈಕಿ 16 ಲಕ್ಷ ಪಡೆದುಕೊಂಡಿದ್ದೇವೆಂದರೆ ಸರಿ. ನಿಪಿ 1 ರಲ್ಲಿ ಉಳಿಕೆ 1 ಲಕ್ಷವನ್ನು 6 ತಿಂಗಳೊಳಗೆ ಪಡೆದುಕೊಂಡು ನೋಂದಣಿಗೆ ಬೇಕಾದ ದಾಖಲೆಗಳನ್ನು ಕೊಟ್ಟು ಕ್ರಯಪತ್ರ ನೊಂದಣಿ ಮಾಡಿಕೊಡುತ್ತೆವೆಂದರೆ ಸರಿ.
ನಿಪಿ 3 ರ ಪ್ರಕಾರ ವಾದಿ 20.02.2013 ರಲ್ಲ ನೋಟೀಸು ಕೊಟ್ಟಿದ್ದಾರೆಂದರೆ ಸರಿ. ನಿಪಿ 3 ರಲ್ಲಿ ಉಳಿಕೆ 1 ಲಕ್ಷ ಕೊಡಲು ಸಿದ್ದರಿದ್ದಾರೆಂದು ನಮೂದು ಇದೆ ಎಂದರೆ

ಸರಿ. ಸಾಕ್ಷಿ ಸ್ವಇಚ್ಛೆಯಿಂದ 2012 ರಲ್ಲೇ ಹಣವನ್ನು ಸೆಟಲ್ ಮಾಡಿದ್ದೇವೆ ಅದಕ್ಕೆ ರಸೀದಿ ಕೊಟ್ಟಿದ್ದಾರೆಂದು ನುಡಿಯುತ್ತಾರೆ. ನಿಪಿ 1 ನೋಂದಣಿ ದಾಖಲೆ ಎಂದರೆ ಸರಿ. ನಿಪಿ 1 ಇ ಸಿ ಯಲ್ಲಿ ನಮೂದು ಇರುತ್ತದೆಂದರೆ ಸರಿ. ಇ ಸಿ ಯಲ್ಲಿ ಅದನ್ನು ತೆಗೆದುಹಾಕಲು ನಿಪಿ 1 ಕರಾರು ಪತ್ರವನ್ನು ರದ್ದಾತಿ ನೊಂದಣಿ ಪತ್ರದ ಮೂಖಾಂತರ ರದ್ದು ಮಾಡಿಸಬೇಕೆಂದು ನನಗೆ ಮತ್ತು ನನ್ನ ಪತ್ನಿಗೆ ಗೊತ್ತಿದೆ.

ಯಾವುದೇ ನೊಂದಾಯಿತ ದಾಖಲೆಯನ್ನು ರದ್ದು ಪಡಿಸಲು ಸಬ್ ರಿಜಿಸ್ಟ್ರರ ಕಛೇರಿಗೆ ಹೋಗಿ ನೊಂದಯಿತ ದಾಖಲೆ ಮುಖಾಂತರವೇ ರದ್ದು ಪಡಿಸಬೇಕೆಂಬ ವಿಚಾರ ಮೊದಲಿನಿಂದಲೂ ತಿಳಿದುಕೊಂಡಿದ್ದೇನೆಂದರೆ ಸರಿ. ನಿಪಿ 3, ಲಿಖಿತ ಹೇಳಿಕೆ, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕರಾರು ಪತ್ರವನ್ನು ಒಪ್ಪಿ ಕೊಂಡಿದ್ದು, ನನ್ನ ಪ್ರಕಾರ ಹಣವನ್ನು ವಾಪಸ್ಸು ಕೊಟ್ಟಿದ್ದೇವೆಂದು ಹೇಳಿದ್ದೇನೆ. ಹಣ ಸಂದಾಯ ರಸೀದಿಗೆ ಇಬ್ಬರು ಸಹಿಯನ್ನು ಮಾಡಬೇಕೆಂದು ನಿಮಗೆ ಗೊತ್ತು ಎಂದರೆ ಸಾಕ್ಷಿ ಹಣ ಪಡೆದುಕೊಂಡವರು ಸಹಿ ಹಾಕಿದರೇ ಸಾಕು ಎಂದು ನುಡಿಯುತ್ತಾರೆ. ನಾನು ಬೇರೆಯವರಿಗೆ ಹಣ ಸಂದಾಯ ಮಾಡಿದ್ದಲ್ಲಿ ಹಣ ಸಂದಾಯ ರಸೀದಿಗೆ ನಾನು ಸಹಿ ಮಾಡಿರುವುದಿಲ್ಲ. ಪ್ರಸ್ತುತ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಓ ಎಸ್ 198/2015 ದಾವೆಯನ್ನು ನಾರಾಯಣಸ್ವಾ ಮಿಯವರು ಸಲ್ಲಿಸಿದ್ದಾರೆಂದರೆ ಸರಿ. ಪ್ರಸ್ತುತ ದಾವೆಯ ಪ್ರತಿವಾದಿಗಳು ಓ ಎಸ್ 198/2015 ದಾವೆಯಲ್ಲಿಯೂ ಪ್ರತಿವಾದಿಗಳು ಎಂದರೆ ಸರಿ. ಪ್ರಸ್ತುತ ದಾವೆ ಪೆಂಡಿಂಗ್ ಇದ್ದರೂ ಸಹ, ನೀವು ನಾರಾಯಣಸ್ವಾ ಮಿಯವರಿಗೆ ಅಗ್ರಿಮೆಂಟ್ ಬರೆದುಕೊಟ್ಟಿದ್ದೀರಿ ಎಂದರೆ ಸಾಕ್ಷಿ ಈ ದಾವೆ ಸಲ್ಲಿಸುವ ಮುಂಚೆ ಬರೆದುಕೊಟ್ಟಿದ್ದೆ ಎಂದು ನುಡಿಯುತ್ತಾರೆ. ವಿಜಯಕುಮಾರ ರವರು ಅಗ್ರಿಮೆಂಟನ್ನು ರದ್ದು ಮಾಡಿಕೊಡುತ್ತೇನೆಂದು ಹೇಳಿದ್ದರು ಅದಕ್ಕೆ ಬರೆದು ಕೊಟ್ಟೆವು ಎಂದು ನುಡಿಯುತ್ತಾರೆ. ಈ ವಿಚಾರವನ್ನು ನಿಪಿ 3 ರಲ್ಲಿ , ಲಿಖಿತ ಹೇಳಿಕೆಯಲ್ಲಿ, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ನನಗೆ ಈಗ ತೋರಿಸಲಾದ ದಾಖಲೆ ಓ ಎಸ್ 198/2015 ರ ದಾವೆಯಲ್ಲಿ ನಾರಾಯಣಸ್ವಾ ಮಿರವರಿಗೆ ಬರೆದುಕೊಟ್ಟಿರುವ ಕರಾರು ಪತ್ರ ಎಂದರೆ ಸರಿ. ಸಾಕ್ಷಿ ಒಪ್ಪಿ ದ್ದರಿಂದ ಅದನ್ನು ನಿಪಿ 10 ಎಂದು

ಗುರುತಿಸಲಾಯಿತು. ನನಗೆ ಈಗ ತೋರಿಸಲಾದ ಮತ್ತೊಂದುದಾಖಲೆ ನಾನು ಮತ್ತು ನನ್ನ ಪತ್ನಿ ಸದರಿ ನಾರಾಯಣಸ್ವಾ ಮಿರವರಿಗೆ ಬರೆದುಕೊಟ್ಟಿರುವ ಕ್ರಯದ ಒಪ್ಪಂದದ ಬಾಬ್ತು ಹಣ ಸಂದಾಯ ರಸೀದಿ ಎಂದರೆ ಸರಿ, ಅದನ್ನು ನಿಪಿ 11 ಎಂದು ಗುರುತಿಸಲಾಯಿತು. ನಿಪಿ 11 ರಲ್ಲಿ ಹಣ ಕೊಟ್ಟವರು ಹಣ ಪಡೆದುಕೊಂಡವರು ಇಬ್ಬರು ಸಹಿ ಹಾಕಿದ್ದಾರೆಂದರೆ ಸಾಕ್ಷಿ ಓದಲು ಬರುವುದಿಲ್ಲ ಎಂದು ತಿಳಿಸಿರುತ್ತಾರೆ, ನಿಪಿ 11 ನ್ನು ಸಾಕ್ಷಿಗೆ ಓದಿ ಹೇಳಿದಾಗ ಇಬ್ಬರು ಪಕ್ಷಗಾರರು ಸಹಿ ಹಾಕಿದ್ದೇವೆಂದು ನುಡಿಯುತ್ತಾರೆ. ಓ ಎಸ್ 198/2015 ಇನ್ನೂ ಪೆಂಡಿಂಗ್ ನಲ್ಲಿ ಇದೆ ಎಂದರ ಸರಿ. ನಿ ಎನ್ 1 ರಲ್ಲಿ ನಮೂದಿರುವ ದಿನಾಂಕ 10.10.2012 ರಲ್ಲಿ ನೀವು ಮತ್ತು ನಿಮ್ಮ ಪತ್ನಿ ವಿಜಯಕುಮಾರ ರವರಿಗೆ 10 ಲಕ್ಷ ನೀಡಿದ್ದೇವೆಂದು ನಮೂದಿಸಿದೆ ಆ ಬಗ್ಗೆ ಅದೇ ದಿವಸ ಅವರಿಂದ ಯಾವುದೇ ದಾಖಲೆ ಬರೆಸಿಕೊಂಡಿಲ್ಲ ಎಂದರೆ ಸಾಕ್ಷಿ ಅದೂ ಎರಡು 10.10.2010 ಅವರು ಅ ದಿನ ರಸೀದಿ ಬರೆದು ಕೊಟ್ಟಿದ್ದಾರೆಂದು ನುಡಿಯುತ್ತಾರೆ. ಆ ರಸೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಅವರು ಅ ರಸೀದಿಯನ್ನು ಪಡೆದುಕೊಂಡು ನಿ ಎನ್ 1 ನ್ನು ಬರೆದುಕೊಟ್ಟಿದ್ದಾರೆಂದು ನುಡಿಯುತ್ತಾರೆ. ಈ ವಿಚಾರವನ್ನು ನಿ ಎನ್ 1 ರಲ್ಲಿ ಬರೆಸಿಲ್ಲ. ಅದೇ ರೀತಿ ರಸೀದಿ ವಾಪಸ್ಸು ಪಡೆದುಕೊಂಡ ಬಗ್ಗೆ ನಿಪಿ 3 ರಲ್ಲಿ , ಲಿಖಿತ ಹೇಳಿಕಯಲ್ಲಿ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಮುಂದುವರೆದು ಜ್ಞಾಪಕ ಇಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ಬರೆಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಬೇಕಾಗಿಲ್ಲ ಎಂದು ಬರೆಸಿಲ್ಲ ಎಂದು ನುಡಿಯುತ್ತಾರೆ. ನಿಎನ್ 1 ರಲ್ಲಿ 10.10.2012 ರಲ್ಲಿ 10 ಲಕ್ಷ ಇತ್ತು ಎಂದು ತೋರಿಸಲು ನಿಮ್ಮ ಬಳಿ ದಾಖಲೆ ಇಲ್ಲ ಎಂದರೆ ಸಾಕ್ಷಿ 10 ಲಕ್ಷ ಕೊಟ್ಟಿರುವುದು 10.10.2010 ರಲ್ಲಿ ಎಂದು ನುಡಿಯತ್ತಾರೆ. 10ಲಕ್ಷ ರೂ ಹೇಗೆ ಬಂತು ಎಂದು ನಿಪಿ 3 ರಲ್ಲಿ, ಲಿಖಿತ ಹೇಳಿಕಯಲ್ಲಿ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ.

ನಿ ಎನ್ 1 ನ್ನು ತಯಾರು ಮಾಡಿದ್ದು ನಿಮ್ಮ ಪ್ರಕಾರ ಎಲ್ಲಿ ಎಂದರೆ ಸಾಕ್ಷಿ ತಮಿಳುನಾಡು ಕೃಷ್ಣಗಿರಿ ಜಿಲ್ಲೆ , ಕೆಲಮಂಗಲಂ ಗ್ರಾಮದಲ್ಲಿ.

ಅದನ್ನು ತಯಾರು ಮಾಡಿದ್ದು ಎಂದರೆ ಸಾಕ್ಷಿ ನಾವು ಬಾಂಡ್ ಪೇಪರ

ಕೊಟ್ಟಿದ್ದೇವು ವಿಜಯಕುಮಾರ ರೆಡಿ ಮಾಡಿಸಿ ಕೊಟ್ಟರು ಎಂದು ನುಡಿಯುತ್ತಾರೆ. ಬಾಂಡ್ ಪೇಪರನ್ನು ನಾನು ತೆಗೆದುಕೊಂಡು ವಿಜಯಕುಮಾರ ರವರಿಗೆ ಕೊಟ್ಟಿದ್ದೇ. ಅದನ್ನು ಕೆಲಮಂಗಲದಲ್ಲಿ ವಿನುತರವರ ಹೆಸರನಲ್ಲಿ ತೆಗೆದುಕೊಂಡಿದ್ದೇ. ನಿ ಎನ್ 1 ಕ್ಕೆ ಸಾಕ್ಷಿದಾರರು ವೆಂಕಟೇಶ್ ಮತ್ತು ನನ್ನ ಬಾಮ್ಮೈದ ಮುರುಳಿ, ಅವರ ಪತ್ನಿ ನವ್ಯ. ವೆಂಕಟೇಶ್ ನನ್ನ ಸ್ನೇಹಿತ. ಈ ಎಲ್ಲಾ ವಿಚಾರಗಳಲ್ಲಿ ನಿಪಿ 3 ರಲ್ಲಿ, ಲಿಖಿತ ಹೇಳಿಕಯಲ್ಲಿ, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿಲ್ಲ.

**ಪಾಟೀ ಸವಾಲನ್ನು** ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.